ಇ) ಬಂದಿದೆ

ಪಶುವೈದ್ಯರು ಹುದ್ದೆಯನ್ನು ಭರ್ತಿ ಮಾಡಲು ಒತ್ತಾಯಿಸಿ ದಿನಾಂಕ 18–12–2003 ರಂದು ರೈತರು ಪ್ರತಿಭಟನೆ ನಡೆಸಿರುತ್ತಾರೆ

ಈ) ದಿನಾಂಕ 19–12–2003 ರಂದು ಉಪನಿರ್ದೇಶಕರು ಭೇಟಿ ನೀಡಿ ಸದರಿ ಪಶು ಚಿಕಿತ್ಸಾಲಯಕ್ಕೆ ಪಶು ಆಸ್ಪತ್ರೆ, ಚೇಳೂರಿನಲ್ಲಿರುವ ಸಹಾಯಕ ನಿರ್ದೇಶಕರನ್ನು ವಾರದಲ್ಲಿ 3 ದಿನ ಮತ್ತು ಪಶುಚಿಕಿತ್ಸಾಲಯ ಗೂಳೂರಿನಲ್ಲಿರುವ ಪಶುವೈದ್ಯಕೀಯ ಪರೀಕ್ಷಕರನ್ನು ವಾರದಲ್ಲಿ 3 ದಿನ ಕಾರ್ಯನಿರ್ವಹಿಸಲು ತಾತ್ಕಾಲಿಕ ವ್ಯವಸ್ಥೆ ಮಾಡಿರುತ್ತಾರೆ ವಿಶೇಷ ನೇರ ನೇಮಕಾತಿ ನಿಯಮಾವಳಿ ಮೂಲಕ 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ

ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಕುರಿತು

33 (540) ಶ್ರೀ ಎ ಆರ್ ಮೂರ್ತಿ (ಸಂತೇಮರಳ್ಳಿ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು, ಕುಂತೂರು ಮಹದೇಶ್ವವರ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರರಿಗೆ ಬಾಕಿ ಇರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಸಂದಾಯ ಮಾಡಲಾಗಿದೆಯೇ, ಮಾಡದಿದ್ದಲ್ಲಿ ಯಾವಾಗ ಹಣ ನೀಡಲಾಗುವುದು (ವಿವರ ನೀಡುವುದು)

ಆ) ಸದರಿ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರುಗಳಿಗೆ ಪೂರ್ಣ ಪ್ರಮಾಣದಲ್ಲಿ ವೇತನ ಮತ್ತು ಇತರೆ ಭತ್ಯೆಗಳನ್ನು ಬಿಡುಗಡೆ ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಯಾವಾಗ ಬಿಡುಗಡೆ ಮಡಲಾಗುವುದು, ಎಷ್ಟು ಹಣ ನೀಡಬೇಕಾಗಿದೆ (ವಿವರ ನೀಡುವುದು)

ಇ) ಸದರಿ ಕಾರ್ಖಾನೆಯು ವಸತಿ ಗೃಹಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು, ಯಾವಾಗ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುವುದು

ಈ) ಕಬ್ಬು ಬೆಳೆಗಾರರು ಹಣ ನೀಡುವಂತೆ ಶಾಂತಿ ಮುಷ್ಕರವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಅಮಾಯಕರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾತಿ ಮಾಡಲಾಗಿದ್ದು ಸದರಿ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆಯೇ ಇಲ್ಲದಿದ್ದಲ್ಲಿ ಕಾರಣವೇನು, ಮೊಕದ್ದಮೆ ಹಿಂತೆಗೆದುಕೊಳ್ಳಲು ಮುಂದೆ ಕ್ರಮ ವಹಿಸಲಾಗುವುದೇ (ವಿವರ ನೀಡುವುದು).

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಕೊಳ್ಳೇಗಾಲ ತಲ್ಲೂಕ್, ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ಬೆಳೆಗಾರರಿಗೆ ಕಬ್ಬು ಸರಬರಾಜು ಮಾಡಿದಕ್ಕೆ ಬಾಕಿ ಇದ್ದ ಹಣವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಲಾಗಿರುತ್ತದೆ ಯಾವುದೇ ಬಾಕಿ ಇರುವುದಿಲ್ಲ

ಆ) ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ವೇತನ ಮತ್ತು ಇತರೇ ಭತ್ಯೆಗಳನ್ನು ಬಿಡುಗಡೆ ಮಾಡಲಾಗಿಲ್ಲ ನವೆಂಬರ್ 2001 ರಿಂದ ಜೂನ್ 2002 ರವರೆಗೆ ನೌಕರರ ವೇತನ 1,75,72, 162 00 ರೂ ಗಳು ಬಾಕಿ ಇದೆ ಈ ಸಂಬಂಧ ಬಾಂಬೆ ಉಚ್ಚ ನ್ಯಾಯಾಲಯದಲ್ಲಿರುವ ಸೂಟ್ ಸಂಖ್ಯೆ 1569 2002 ರಲ್ಲಿ ದಾಖಲಾಗಿದ್ದು ನೌಕರರಿಗೆ ಪಾವತಿಸಲು ಬಾಕಿ ಇರುವ ಸುಮಾರು 1 75 ಕೋಟಿ ರೂ ಗಳನ್ನು ಕಾರ್ಖಾನೆಯಿಂದ ವಸೂಲು ಮಾಡಲು ಉಪ ಆಯುಕ್ತರು ಕಾರ್ಮಿಕ ಇಲಾಖ

ರವರು ವಸೂಲಾತಿ ದೃಢೀಕರಣ ಪತ್ರ ನೀಡಿದ್ದರೂ ಸಹ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಈ ತಡೆಯಾಜ್ಞೆ ತೆರವುಗೊಳಿಸಲು ಹಾಗೂ ಮುಂದೆ ಪ್ರಕರಣವನ್ನು ನಡೆಸಲು ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ

ಇ) ಸದರಿ ಕಾರ್ಖಾನೆಯು ಖಾಸಗಿ ವಲಯದಲ್ಲಿರುವುದರಿಂದ ವಸತಿ ಗೃಹಗಳಿಗೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರದಿಂದ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಗೃಹ ಇಲಾಖೆಯಿಂದ ತಿಳಿದು ಬಂದಿದೆ

ಕೆ ಹೆಚ್ ಡಿ.ಸಿ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸುವುದು

34 (561) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಭಾಗದಲ್ಲಿ ಗುಡಿ ಕೈಗಾರಿಕೆಯಾಗಿರುವ ಕೈಮಗ್ಗ ನೇಕಾರಿಕೆಯನ್ನು ಪ್ರೋತ್ಸಾಹಿಸಲು ಕೆಹೆಚ್ ಡಿ ಸಿ ಕೆಂದ್ರ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ಸರ್ಕಾರ ಆದೇಶ ಹೊರಡಿಸಿದೆಯೆ ಹಾಗಿದ್ದಲ್ಲಿ, ಎಂದು ಈ ಆದೇಶ ಹೊರಡಿಸಲಾಗಿದೆ

ಆ) ಆದೇಶ ಹೊರಡಿಸಿದ್ದರೂ ಈ ಸ್ಥಳಾಂತರ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬರದೇ ಇರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣವೇನು

ಇ) ಈ ಕೇಂದ್ರ ಕಛೇರಿಯಲ್ಲಿ ಎಷ್ಟು ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಇವರಲ್ಲಿ ಎಷ್ಟು ಜನ ಹುಬ್ಬಳ್ಳಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ

ಈ) ಈ ನಿಗಮಕ್ಕೆ ಸಂಬಂಧಿಸಿದ ಉತ್ಪಾದನೆ, ಮಾರಾಟ, ಖರೀದಿ ಇಲಾಖೆಗಳ ವ್ಯವಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರಿನಲ್ಲಿಯೇ ಇರುವುದರಿಂದ ಉತ್ತರ ಕರ್ನಾಟಕ ನೇಕಾರರಿಗೆ ಮತ್ತು ಹುಬ್ಬಳ್ಳಿ ಕಛೇರಿಗೆ ಆಗುತ್ತಿರುವ ಪ್ರಯೋಜನವಾದರೂ ಏನು

ಉ) ನಿಗಮ ಸ್ಥಳಾಂತರದ ಸರ್ಕಾರಿ ಆದೇಶವನ್ನು ಧಿಕ್ಕರಿಸಿರುವ ಈ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ

ಊ) ಹುಬ್ಬಳ್ಳಿಯಲ್ಲಿರುವ ನೂಲು ಖರೀದಿಸುವ ವಿಭಾಗವನ್ನು ಬೇರೆಡೆಗೆ ಸ್ಥಳಾಂತರಿಸಲು ಸರ್ಕಾರ ಆಲೋಚಿಸಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು ದಿನಾಂಕ 28 10 96ರಲ್ಲಿ ಸರ್ಕಾರಿ ಆದೇಶ ಹೊರಡಿಸಿದೆ

ಆ) ನಿಗಮದ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಕೆಲವು ಸಿಬ್ಬಂದಿಯನ್ನು ಬೆಂಗಳೂರಿನಲ್ಲಿ ಉಳಿಸಿಕೊಳ್ಳಲಾಗಿದೆ

ಇ) ನಿಗಮದ ಕೇಂದ್ರ ಕಛೇರಿಯು ಹುಬ್ಬಳ್ಳಿಯಲಾಗಿದ್ದು ಅಲ್ಲಿ 63 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ

ಈ) ಜಂಟಿ ನಿರ್ದೇಶಕರು, ಉತ್ಪಾದನೆ, ಮಾರಾಟ, ಲೆಕ್ಕ ಪತ್ರ ವಿಭಾಗಗಳ ವ್ಯವಸ್ಥಾಪಕರು ತಾಂತ್ರಿಕ ಅಧಿಕಾರಿಗಳು ಬೇಕಾದ ಸಿಬ್ಬಂದಿಯೊಂದಿಗೆ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು